ಹೆಸರುಬೇಳೆ, ಕಡಲೆಕಾಳಿನ ದೊಡ್ಡ ಬಟ್ಟಲನ್ನು ಖಾಲಿ ಮಾಡುತ್ತಿದ್ದರು. ಜೊತೆಯಲ್ಲಿ ಪ್ರೊಟೀನ್ ಭರಿತ ಹಾಲಿನ ಲೋಟ.

ಭಾವೇಶ್ ತಮ್ಮೆಲ್ಲ ಪರಿಶ್ರಮ ಒಗ್ಗೂಡಿಸಿ ಆಡಿದರು. ಆದರೆ ಮತ್ತೆ ಕೆಲವು ಅಂಗುಲದಲ್ಲಿ ಸೋತರು. ಸೋಲು ಅವರ ಉತ್ಸಾಹವನ್ನು ಕುಗ್ಗಿಸಲಿಲ್ಲ. ಇಂದಿಗೂ ಕ್ರೀಡೆ ಅವರ ಪ್ರಿಯವಾದ ವಿಷಯವಾಗಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಸುಮಾರು 117 ಪದಕಗಳನ್ನು ಗಳಿಸಿದ್ದಾರೆ.

ಅಧ್ಯಾಯ–14

## ಕೈ ಹಿಡಿದು ಕರೆತನ್ನಿ ಸಾಧನಕೇರಿಗೆ

ಅನೇಕ ಬಾರಿ ಭಾವೇಶ್ ಯೋಚಿಸುತ್ತಿದ್ದರು, ತಾನು ತಮ್ಮ ಕಾಲುಗಳ ಮೇಲೆ ನಿಂತದ್ದಾಯಿತು. ಸಚಿನ್ ಅವರಂತಹ ಉತ್ತಮ ಗೆಳೆಯರು ದೊರೆತರು. ನೀತಾ ಅವರ ಬದುಕಿನುದ್ದದ ಸಾಂಗತ್ಯ ದೊರೆಯಿತು. ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ. ಆದರೆ ಮನಸ್ಸಿಗೇಕೋ ಸಮಾಧಾನವಿಲ್ಲ. ಎದೆಯ ಮೂಲೆಯಲ್ಲಿ ಅಪರಾಧಿ ಪ್ರಜ್ಞೆ ಕುಟುಕುತ್ತಿದೆ. ಕಾರಣ, ಯಾವ ಉದ್ದೇಶದ ಕನಸು ಕಂಡು ಭಾವೇಶ್ ಮತ್ತು ನೀತಾ ಜೊತೆಯಾಗಿದ್ದರೋ ಅದಿನ್ನೂ ಈಡೇರಿರಲಿಲ್ಲ. ತಮ್ಮಂತೆ ಬಹಳಷ್ಟು ದೃಷ್ಟಿಬಾಧಿತರಿದ್ದಾರೆ, ಅವರಿಗಾಗಿ ನಾವು ಕೆಲಸ ಮಾಡಬೇಕು. ಆ ಧ್ಯೇಯದತ್ತ ಇನ್ನೂ ಅಂಬೆಗಾಲೂ ಇಟ್ಟಿಲ್ಲ. ಪ್ರತಿ ಬಾರಿಯಂತೆ ಪ್ರವಾಸಿ ಸೀಸನ್ ಬರುತ್ತಿತ್ತು. ಭಾವೇಶ್ ಮತ್ತು ನೀತಾ ತಮ್ಮ ಜವಾಬ್ದಾರಿಗಳನ್ನು ಹೊತ್ತು, ಮಾರ್ಕೆಟಿನ ಆ ಸ್ಟಾಲ್ ನಡೆಸುತ್ತಿದ್ದರು. ಅಲ್ಲಿ ಮತ್ತೊಮ್ಮೆ ಭಾವೇಶ್ ಅವರಿಗೆ ಅಪರಾಧಿ ಪ್ರಜ್ಞೆ ಜಾಗೃತವಾಗುತ್ತಿತ್ತು. ಆ ಮಾರುಕಟ್ಟೆಯಲ್ಲಿ ಬಹಳಷ್ಟು ದೂರದ ಊರುಗಳಿಂದ ಬಂದ ದೃಷ್ಟಿಹೀನರಿದ್ದರು. ಅವರಲ್ಲಿ ಹಲವರನ್ನು ಭಾವೇಶ್ ಗುರುತಿಸಿಯೂ ಬಲ್ಲರು, ಅವರು ತಮ್ಮ ಕೋಲನ್ನು ಬಡಿಯುತ್ತಾ ಭಿಕ್ಷೆ ಬೇಡುತ್ತಾ, ಇವರ ಮುಂದೆಯೇ ಹಾದುಹೋಗುತ್ತಿದ್ದರು. ಇಲ್ಲಿ ಭಾವೇಶ್ ಮಾರುಕಟ್ಟೆಯ ಮಧ್ಯದಲ್ಲಿ ತಮ್ಮ ಮೇಜಿನ ಮೇಲೆ ತಮ್ಮ ಮೋಂಬತ್ತಿಗಳನ್ನು ಇಟ್ಟು ಸ್ವಾಭಿಮಾನದಿಂದ ನಿಂತಿದ್ದರೆ, 'ಕಣ್ಣಿಲ್ಲಪ್ಪೋ ಕಣ್ಣಿಲ್ಲ, ಕಣ್ಣಿಲ್ಲದ ಕುರುಡನಿಗೆ ಎರಡು ಕಾಸು ಹಾಕಿ' ಎಂದು ಬೇಡುತ್ತಾ ಇವರ ಮುಂದೆಯೇ ಕುರುಡರು ಹಾದುಹೋಗುವ ವಿಪರ್ಯಾಸವಿತ್ತು. ಅಂಧ ವ್ಯಕ್ತಿಗಳ ಬದುಕಿನ ಎರಡು ಮುಖಗಳಾಗಿ ಭಾವೇಶ್ ಮತ್ತು ಭಿಕ್ಷುಕರು ಸಮಾಜದ ಎದುರು ನಿಂತಿದ್ದರು.

ಈ ಭಿಕ್ಷೆ ಬೇಡುವುದನ್ನು ನಿಲ್ಲಿಸುವುದು ಹೇಗೆ? ಭಾವೇಶ್ ಅವರೊಳಗೇ ವಿಷಯ ಮಥಿಸುವುದು. ಒಂದು ದಿನ ಹೀಗೆಯೇ ಮೂರ್ನಾಲ್ಕು ಅಂಧರು ತಮ್ಮ ಕೋಲನ್ನು ಕುಟ್ಟುತ್ತಾ ಭಿಕ್ಷೆ ಬೇಡುತ್ತಾ ತಮ್ಮ ಮುಂದಿನಿಂದಲೇ ಹಾದುಹೋದಾಗ, ಇವರಿಂದ ಸಹಿಸಲು ಆಗಲಿಲ್ಲ. ನೀತಾ ಕೂಡ ಹೇಳಿದರು – 'ನೋಡಿ, ನಿಮ್ಮ ಗೆಳೆಯರು ಬರುತ್ತಿದ್ದಾರೆ'. ಭಾವೇಶ್ ಅವರನ್ನು ತಡೆದು, ತಮ್ಮ ಮೇಜಿನ ಮೇಲೆ ಇದ್ದ ಮೋಂಬತ್ತಿಗಳನ್ನು ಸ್ಪರ್ಶದಿಂದ ಅವರಿಗೆ ಪರಿಚಯ ಮಾಡಿಸಿದರು. ಅವರಿಗೆ ಹೇಳಿದರು: 'ನೋಡಿ ಮಿತ್ರರೇ, ನಾನು ನಿಮ್ಮ ಗುಂಪಿಗೇ ಸೇರಿದವನು. ನಾನು ಕೂಡಾ ಅಂಧನೆ. ಈಕೆ ನನ್ನ ಧರ್ಮಪತ್ನಿ ನೀತಾ' ಎಂದು ಪರಿಚಯಿಸುತ್ತಾ ಅವರನ್ನು ಕೇಳಿದರು – 'ಇಷ್ಟು ಹೇಳಿ, ನೀವು ಒಂದು ದಿನಕ್ಕೆ ಭಿಕ್ಷೆ ಬೇಡಿ ಎಷ್ಟು ಸಂಪಾದಿಸುತ್ತೀರಿ?'. ಅವರಲ್ಲಿ ಯಾರೂ ಬಾಯಿ ಬಿಡಲಿಲ್ಲ. ಯಾರೂ ಉತ್ತರ ನೀಡುತ್ತಿಲ್ಲ. ಭಾವೇಶ್ ಮತ್ತೆ ಮತ್ತೆ ಒತ್ತಾಯಿಸಿ ಕೇಳಿದರು. ಈತ ನೋಡಿದರೆ ತಾನೂ ಅಂಧ ಎನ್ನುತ್ತಿದ್ದಾನೆ. ಬಹುಶಃ ತಮ್ಮ ದಿನದ ಆದಾಯ ಈತನಿಗೆ ಗೊತ್ತಾದರೆ, ಈತ ಮೋಂಬತ್ತಿ ಮಾರುವುದನ್ನು ಬಿಟ್ಟು ತಮ್ಮ ಜೊತೆಗೆ ಭಿಕ್ಷೆಗೆ ಇಳಿದು ತಮಗೆ ಸ್ಪರ್ಧಿಯಾಗುತ್ತಾನೆ ಎಂದೇ ಅವರಿಗೆ ಅನಿಸಿರಬೇಕು! 'ಅರೆ, ಈ ಭಿಕ್ಷೆಯಲ್ಲಿ ಎಂಥಾ ಗಳಿಕೆ, ಬರೀ ಚಿಲ್ಲರೆ ಕಾಸು' ಎಂದು ಮಾತು ಬದಲಿಸಿದರೇ ಹೊರತು, ಬಾಯಿ ಬಿಡಲಿಲ್ಲ.

ಭಾವೇಶ್ ಮನಸ್ಸಿನಲ್ಲೇ ಮುಗುಳ್ನಗುತ್ತಾ ಹೇಳಿದರು. 'ಅರೆ ಭಾಯ್, ನೀವು ತಪ್ಪಾಗಿ ಭಾವಿಸುತ್ತಿದ್ದೀರಿ. ನಿಮ್ಮ ಜೊತೆಗೆ ನಾನೂ ಭಿಕ್ಷೆ ಬೇಡಲು ಇಳಿಯುವುದಿಲ್ಲ. ನಿಮ್ಮನ್ನು ನನ್ನೊಡನೆ ಕೈಜೋಡಿಸಲು ಆಹ್ವಾನಿಸಲು ಇಚ್ಛಿಸುತ್ತೇನೆ'. ಇದೇ ಹೊತ್ತಿಗೆ ನೀತಾ ಅವರೆಲ್ಲರಿಗೂ ಚಹಾ ತರಿಸಿದ್ದರು. ಈಗ ಅವರ ಗೆಳೆತನ ಒಂದಿಷ್ಟು ಮುಂದಕ್ಕೆ ಸರಿಯಿತು. ನೀತಾ ಬಹಳಷ್ಟು ಸಹಾನುಭೂತಿಯಿಂದ ಮಾತನಾಡಿಸಿದರು. ಕಡೆಗೂ ಅವರು ಬಾಯಿಬಿಟ್ಟರು. ದಿನವೊಂದಕ್ಕೆ 80ರಿಂದ 100 ರೂಪಾಯಿ ಗಳಿಸಿಯೇ ಬಿಡುತ್ತೇವೆ ಎಂದು ಹೆಮ್ಮೆಯಿಂದ ಹೇಳಿದರು. ಆ ಸಂದರ್ಭದಲ್ಲಿ ಭಾವೇಶ್ ಅವರ ಸಾಲಗಳೇನೋ ತೀರಿತ್ತು, ಆದರೆ ಆರ್ಥಿಕ ಸ್ಥಿತಿ ಅಷ್ಟು ಭದ್ರವಾಗಿ ಇರಲಿಲ್ಲ. ಇವರುಗಳು ಭಿಕ್ಷೆ ಬೇಡುವುದನ್ನು ನಿಲ್ಲಿಸಬೇಕೆಂದರೆ, ದಿನವೊಂದಕ್ಕೆ ಅಷ್ಟು ಸಂಬಳ ನೀಡಲು ತಾನು ಶಕ್ತವಾಗಿರಬೇಕು ಎಂಬ ಅರಿವು ಭಾವೇಶ್ ಅವರಿಗಿತ್ತು. ಆದರೂ ಅವರು ಹೇಳಿದರು, 'ಈ ಭಿಕ್ಷೆ ಬೇಡುವ ಕೆಲಸ ನಿಲ್ಲಿಸಿ. ನಮ್ಮ ಜೊತೆ ಮನೆಗೆ ಬನ್ನಿ. ನಾವು ಜೊತೆಯಾಗಿ ಏನಾದರೂ ಮಾಡೋಣ'. ಅವರೆಲ್ಲರದೂ ಒಂದೇ ಪ್ರಶ್ನೆ, ಭಿಕ್ಷೆ ನಿಲ್ಲಿಸಿದರೆ ತಮ್ಮ ಬದುಕು ನಡೆಯುವುದಾದರೂ ಹೇಗೆ? ತಮ್ಮ ಹೊಟ್ಟೆಯ ಪಾಡೇನು?

ಕಣ್ಣಿಲ್ಲದಿದ್ದರೆ, ಕೆಲಸವಿಲ್ಲ; ಕಣ್ಣಿಲ್ಲದಿದ್ದರೆ, ಭಿಕ್ಷೆಯ ಹೊರತು ಬೇರೆ ದಾರಿ ಇಲ್ಲ ಎಂದು ಇಡೀ ಸಮಾಜ ನಂಬಿರುವಾಗ, ಆ ಕುರುಡರು ಕೂಡಾ ನಂಬಿದ್ದರೆ ಅಚ್ಚರಿ ಏನು? ಇಡೀ ದೇಹದಲ್ಲಿ ಇಲ್ಲದಿರುವುದು ಕಣ್ಣು ಮಾತ್ರವಾದರೂ, ಉಳಿದೆಲ್ಲ ದೇಹ, ಮನಸ್ಸು, ಮೆದುಳು ಎಲ್ಲವೂ ಕಾರ್ಯಹೀನ. ಭಿಕ್ಷೆ ಬೇಡುವ ಕಾಯಕದಲ್ಲಿ ಅಭಿಮಾನವಿಲ್ಲದ ಬದುಕು ಕುರುಡರದು ಎಂದು ಭಾವೇಶ್ ಅವರಿಗೆ ತಿಳಿದಿತ್ತು. ಅವರಲ್ಲಿ ಇರುವ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸ ಮೂಡಿಸುವುದು, ಸಮಾಜದ ಪೂರ್ವಗ್ರಹವನ್ನು ಬದಲಿಸುವುದು ಅಷ್ಟು ಸುಲಭದ ಸಾಹಸವಾಗಿರಲಿಲ್ಲ.

ಆ ಕ್ಷಣ ಭಾವೇಶ್ ಅವರ ಬಾಯಿಂದ ಮಾತು ಹೊರಬಿದ್ದಿತ್ತು – 'ನಿಜ, ದಿನಕ್ಕೆ ನೂರು ರೂಪಾಯಿಯೇ ನೀವು ಸಂಪಾದಿಸಬಹುದು. ನಾನು ನಿಮಗೆ ದಿನಕ್ಕೆ ಇನ್ನೂರು ರೂಪಾಯಿ ಕೊಡುವೆ. ಗೌರವದ ಬದುಕಿನ ಹಾದಿಗೆ ನನ್ನೊಡನೆ ಬನ್ನಿ'. ಆದರೆ ಅವರಿಗೆ ವಿಶ್ವಾಸ ಮೂಡಲಿಲ್ಲ. ತಮಗೆ ದಿನಕ್ಕೆ 200 ರೂಪಾಯಿ ಈತ ನಿಜಕ್ಕೂ ಕೊಡುವನೆ? ಕುರುಡರು ಮಾಡುವಂತಹ ಕೆಲಸ, ದಿನಕ್ಕೆ ಇನ್ನೂರು ರೂಪಾಯಿ ಗಳಿಸುವಂತಹುದು ಏನಿದ್ದೀತು? ಅವರಿಗೆ ಬೆರಗು. ತಮಗೆ ಏನೋ ಮೋಸ ಆಗಲಿದೆ ಎಂಬ ಅನುಮಾನ. ಅವರಿಗೆ ಭಾವೇಶ್ ಅವರ ಮಾತಿನಲ್ಲಿ ಭರವಸೆ ಇರಲಿಲ್ಲ. ಭಾವೇಶ್ ಮತ್ತೆ ಹೇಳಿದರು, 'ನನ್ನಲ್ಲಿ ವಿಶ್ವಾಸವಿಡಿ. ನಿಮಗೆ ದಿನಕ್ಕೆ ಇನ್ನೂರು ರೂಪಾಯಿ ಕೊಡುವೆ. ನಿಮಗೆ ಇರಲು ಜಾಗ, ಊಟದ ವ್ಯವಸ್ಥೆಯನ್ನೂ ಮಾಡುವೆ. ಈ ಭಿಕ್ಷೆ ಎತ್ತುವ ಅತ್ಯಂತ ಕೆಳಮಟ್ಟದ ಕೆಲಸವನ್ನು ಬಿಟ್ಟು ಬನ್ನಿ' ಎಂದರು. ಕೊನೆಗೂ ಆ ಭಿಕ್ಷುಕರಿಗೆ ಇವರ ಮಾತಿನಲ್ಲಿ ನಂಬಿಕೆ ಬಂದಿತು. ಆ ದಿನ ಸ್ಟಾಲ್ ಅನ್ನು ಅರ್ಧ ಗಂಟೆ ಮೊದಲೇ ಮುಚ್ಚಿ, ಭಾವೇಶ್ ಮತ್ತು ನೀತಾ ಆ ಅಂಧರನ್ನು ಕರೆದುಕೊಂಡು ಮನೆಗೆ ಬಂದರು. ತಂದೆಗೆ ನಿಜಕ್ಕೂ ಗಾಬರಿಯಾಯಿತು. ಇಷ್ಟು ಜನರು ಒಂದು ಕೋಣೆಯಲ್ಲಿ ಇರುವುದಾದರೂ ಹೇಗೆ?

ಮರುದಿನವೇ ಬಾಡಿಗೆಗೆ ಕೋಣೆ ಹುಡುಕತೊಡಗಿದರು. ಆರ್.ಕೆ. ವಾಡಿಗೆ ಸಂದೀಪ್ ಢೆಬೆ ಎಂಬಾತ ಹಾಲು ಕೊಡಲು ಬರುತ್ತಿದ್ದರು. ಸಂದೀಪ್ ಢೆಬೆ ಮಹಾಬಲೇಶ್ವರದಿಂದ ಸತಾರಕ್ಕೆ ಹೋಗುವ ರಸ್ತೆಯಲ್ಲಿ, ಆರು ಕಿಲೋಮೀಟರ್ ದೂರದಲ್ಲಿದ್ದ ಸಿಂದೋಡಾ ಹೆಸರಿನ ಹಳ್ಳಿಯಲ್ಲಿ ವಾಸಿಸುತ್ತಿದ್ದ. ಆತನ ಬಳಿ ಆರು ಕೋಣೆಗಳು ಇದ್ದವು. ಆತ ಅವುಗಳನ್ನು ಬಾಡಿಗೆಗೆ ಕೊಡಲು ತಯಾರಾದ.

ತಿಂಗಳಿಗೆ 4000 ರೂಪಾಯಿಗಳ ಬಾಡಿಗೆಯ ಮೇಲೆ ಆ ಕೋಣೆಗಳನ್ನು ತೆಗೆದುಕೊಂಡರು. ಮನೆಯಲ್ಲಿ ಮಾಡುತ್ತಿದ್ದ ಮೋಂಬತ್ತಿಯ ತಮ್ಮ ಕಾರ್ಖಾನೆಯನ್ನೂ ಧೈರ್ಯ ಮಾಡಿ ಸಿಂದೋಡಾಗೆ ತೆಗೆದುಕೊಂಡು ಹೋಗಲು ನಿರ್ಧರಿಸಿದರು. ಅಲ್ಲಿ ಹೋಗಿ, ಎರಡು ಕೋಣೆಗಳನ್ನು ಮೋಂಬತ್ತಿಗಳ ವರ್ಕ್‌ಶಾಪ್ ಆಗಿ ಪರಿವರ್ತಿಸಿ, ತಮ್ಮೊಡನೆ ಕರೆತಂದ ಅಂಧರಿಗೆ ತರಪೇತು ಕೊಡಲು ಆರಂಭಿಸಿದರು. ಮತ್ತೆರಡು ಕೋಣೆಗಳಲ್ಲಿ ಆ ಅಂಧ ಮಿತ್ರರನ್ನು ಇರಿಸಿದರು. ನೀತಾ ಮತ್ತೆರಡು ಕೋಣೆಗಳನ್ನು ಅಂಧ ಹೆಣ್ಣುಮಕ್ಕಳಿಗೆ ಕಾಯ್ದಿರಿಸಿದರು. ಹೊರಗೆ ಮುಖಮಂಟಪವಿತ್ತು. ಅಲ್ಲಿ ಅಡುಗೆ ಮಾಡಿ, ಈ ಎಲ್ಲ ಅಂಧ ಮಿತ್ರರಿಗೆ ಬಡಿಸಲು ಸಾಧ್ಯವಿತ್ತು.

ಆ ವರ್ಕ್‌ಶಾಪ್ ಅಲ್ಲಿಗೆ ವರ್ಗಾಯಿಸುವ ಹಿಂದೆಯೂ ಒಂದು ದೊಡ್ಡ ಕತೆ ಇತ್ತು. ರತನ್ ಭಾಯಿ ಮರ್ಚೆಂಟ್ ಮತ್ತು ಅವರ ನಂತರ ಪ್ರಕಾಶ್ ಭಾಯಿ ಮರ್ಚೆಂಟ್ ಹಾಗೂ ಚೇತನ್ ಭಾಯಿ ಮರ್ಚೆಂಟ್ ಆರ್.ಕೆ.ವಾಡಿಯ ಟ್ರಸ್ಟಿಗಳಾಗಿದ್ದರು. ಅವರೆಲ್ಲರೂ ಭಾವೇಶ್ ಅವರ ಮೋಂಬತ್ತಿ ಕೆಲಸವನ್ನು ಮೆಚ್ಚುಗೆಯಿಂದ ನೋಡಿದ್ದರು. ತಮ್ಮಲ್ಲಿ ದುಡಿಯುವ